ಯಾರಿಗಾದರೂ ಈರ್ಷ್ಯೆ ಬರುವಂತಹ ನನ್ನ ರೂಪ, ನನ್ನ ಎತ್ತರ... ಪ್ರಶಾಂತನ ಕಣ್ಣು ಕುಕ್ಕಿರಬೇಕು. ಹೊಟ್ಟೆಕಿಚ್ಚು ಅವನಿಗೆ ಅಂದುಕೊಂಡೆ.

'ಏನಾಯ್ತು?' ಶ್ರದ್ಧಾಳ ಧ್ವನಿ. 'ಯಾಕೆ ಒಂಥರಾ ಇದ್ದೀರ?' 'ಪ್ರಶ್ನಾ ಮನೆಗೆ ಹೋಗಿ ಬರ್ತೀನಿ ಅಂತ ಹೋದವರು... ಯಾಕೆ ಬೇಜಾರು ಮಾಡಿಕೊಂಡು ಬಂದಿದ್ದೀರ? ಏನಾದ್ರೂ ಮಾತು ಕತೆ ನಡೀತಾ ?...ಪ್ಲೀಸ್ ಹೇಳಿ...' ಶ್ರದ್ಧಾ ಕೇಳತೊಡಗಿದಳು.

'ಹಾಗೇನಿಲ್ಲಮ್ಮ...ಏನೂ ಅಂದುಕೊ ಬೇಡ.' ಅವಳಿಗೆ ಸಮಾಧಾನ ಮಾಡಿದೆ. 'ಸುಮ್ಮನೆ ಹರಟುತ್ತ ಇದ್ವಿ... ಪ್ರಶಾಂತ ಬಂದು ಅವಳನ್ನ ಕರೆದುಕೊಂಡು ಹೋದ. ನಾನು ಪ್ರಶ್ನಾ ಇಬ್ಬರೇ ಬೀಚಲ್ಲಿ ಮಾತಾಡ್ತಿದ್ದೆವು. ...ಅವಳು ಮಾತಾಡಿದರೆ ತಾನೆ... ನಾನೇ ಮಾತಾಡ್ತಿದ್ದೆ ಅಷ್ಟೆ...' ಅಂದು ನಕ್ಕೆ. ಅವಳ ಮನಸ್ಸು ಹಗುರಾಗಿಸಿದೆ. ಶ್ರದ್ಧಾ ಮೊದಲು ಮಾತು ಬಹಳ ಕಡಿಮೆ. ಮದುವೆ ನಂತರ ಮಾತು ಜಾಸ್ತಿ ಆಗಿದೆ. ಹೆಣ್ಣು ಮಕ್ಕಳು ಹಾಗೇ ಅಂತೆ... ಮದುವೆಗೆ ಮೊದಲು ಮಾತೇ ಇರೋಲ್ಲ, ಆ ನಂತರ ಬರೀ ಅವರೇ ಮಾತಾಡ್ತಾರೆ... ಗಂಡಸರಿಗೆ ಕೇಳೋದು ಮಾತ್ರ ಕೆಲಸ ಅಂತೆ. ಇದೆಲ್ಲ ನಮ್ಮ ಮದುವೆಗೆ ಮೊದಲು ಕಾಲೇಜು ಜೀವನದ ಮಾತುಗಳು. ಆದರೆ ನನ್ನ ಜೀವನದಲ್ಲಿ ಆಗಿದ್ದಂತೂ ಇದು ನಿಜ. ನಾನು ಶ್ರದ್ಧಾ ಇದ್ದಾಗ ಬರೀ ಅವಳೇ ಏನಾದರೂ ಹೇಳುತ್ತಲೇ ಇರುತ್ತಾಳೆ. ಅದನ್ನು ನಿರಾಕರಿಸಬೇಕು ಅಂತ ನನಗೆ ಯಾವತ್ತೂ ಅನ್ನಿಸಿಲ್ಲ. ಯಾಕೆಂದರೆ ಅವಳ ಮಾತುಗಳು ಭೂಮಿಯಿಂದ ಹಿಡಿದು ಆಕಾಶದವರೆಗೂ, ಇರುವೆಯಿಂದ ಹಿಡಿದು ಆನೆಯವರೆಗೂ, ಭಿಕ್ಷುಕನಿಂದ ಹಿಡಿದು ಅರಮನೆಯವರೆಗೂ... ಏನಾದರೂ ವಿಷಯಗಳನ್ನು ಹೊತ್ತಿರುತ್ತವೆ. ಕೇಳಲು ನನಗೂ ಸೊಗಸು ಅನ್ನಿಸುತ್ತಿರುತ್ತದೆ. ಈ ಪ್ರಶಾಂತನ ತರಹದ ಕಾಡುಹರಟೆ ಅಲ್ಲ.

ಅಮ್ಮ ಅಪ್ಪ ಎಲ್ಲರ ಜೊತೆ ಹರಟುತ್ತಾ ಊಟ ಮುಗಿಸಿ ಮಲಗಿದ ಮೇಲೆ ಕೂಡ ನನ್ನ ಮನಸ್ಸು ಕಾಲೇಜಿನ ದಿನಗಳ ಕಡೆ ಓಡಿತ್ತು. ಪ್ರಶಾಂತ ನನ್ನ ಬಾಲ್ಯ ಸ್ನೇಹಿತ. ನನಗಿಂತ ಎರಡು ವರ್ಷ ದೊಡ್ಡವನು. ಸಾಕಷ್ಟು ಶ್ರೀಮಂತ. ತೋಟ, ಗದ್ದೆ, ಎಸ್ಟೇಟುಗಳ ಒಡೆಯ. ನಮ್ಮ ತಂದೆ ಮಧ್ಯಮವರ್ಗದ ಪೋಸ್ಟ್ ಮಾಸ್ಟರ್ ಆಗಿ ರಿಟೈರ್ ಆದವರು. ನನ್ನ ಪ್ರಶಾಂತನ ಸ್ನೇಹಕ್ಕೆ ಯಾವ ಧಕ್ಕೆಯೂ ಇರಲಿಲ್ಲ. ನಾನು ಪ್ರಶ್ನಾ ಒಂದೇ ತರಗತಿಯವರು. ಒಟ್ಟಿಗೇ ಓದಿದವರು. ನಮ್ಮ ಸ್ನೇಹ ಎಷ್ಟು ನಿಕಟವಾಗಿತ್ತು ಎಂದರೆ ಇಡೀ ಕಾಲೇಜು ನಮ್ಮನ್ನು ಪ್ರೇಮಿಗಳು ಎಂದೇ ಗುರುತು ಹಿಡಿಯುವಷ್ಟು. ಅವಳ ತಾಯ್ತಂದೆಯರು, ನಮ್ಮ ತಾಯ್ತಂದೆಯರು ಎಲ್ಲರೂ ಒಂದೇ ಕುಟುಂಬ ಎನ್ನುವಂತೆ ಇದ್ದೆವು. ಆದರೆ ನನ್ನ ಮತ್ತು ಪ್ರಶ್ನಾಳ ನಡುವೆ ಪ್ರೀತಿ, ಪ್ರಣಯ, ಮದುವೆ ಇಂತಹ ಯಾವುದೇ ವಿಚಾರಗಳೂ ಎಂದೂ ಬಂದಿರಲಿಲ್ಲ. ಪ್ರಶಾಂತ ಓದಿನ ಬಳಿಕ ಉದ್ಯೋಗ ಅರಸಿ ಹೊರಗೆ ಕೆಲಕಾಲ ಹೋಗಿ ಬಂದು ಬಿಟ್ಟನು. ನಾನು ಕಾಲೇಜು ಮುಗಿದ ಮೇಲೆ ಉದ್ಯೋಗವನ್ನರಸಿ ಅನೇಕ ಕಡೆಗಳಲ್ಲಿ ಸುತ್ತಾಡಿ ಕೊನೆಗೆ ಬೆಂಗಳೂರಿನ ಖಾಸಗಿ ಕಂಪೆನಿಯಲ್ಲಿ ನನ್ನ ಬದುಕಿನ ಮುಂದಿನ ಹಾದಿಯನ್ನು ಸುಗಮ ಮಾಡಿಕೊಳ್ಳುವ ತಿಣುಕಾಟದಲ್ಲಿ ನನಗೆ ಪ್ರಶ್ನಾ ಒಂದು ರೀತಿ ಮರೆತೇ ಹೋಗಿದ್ದಳು. ಕಾಲೇಜಿನ ನಂತರ ಐದುವರುಷಗಳ ಕಾಲ ನಮ್ಮ ಭೇಟಿ ಕೂಡ ಆಗಿರಲಿಲ್ಲ. ಒಂದು ದಿನ ಅಮ್ಮ ಫೋನ್‌ನಲ್ಲಿ ಹೇಳಿದ್ದಳು – 'ಪ್ರಶ್ನಾಗೆ ಮದುವೆ ಕಣೋ. ನಿನ್ನ ಸ್ನೇಹಿತ ಪ್ರಶಾಂತನೇ ಹುಡುಗ. ಇಬ್ಬರೂ ಬಂದು ಪತ್ರಿಕೆ ನೀಡಿದ್ದಾರೆ'. ಎಲ್ಲೋ ಹೃದಯದ ಮೂಲೆಯಲ್ಲಿ ಸಣ್ಣಗೆ ಇರುವೆ ಕಡಿದಂತೆ ಅನ್ನಿಸಿದ್ದೇನೋ ದಿಟ. ಮದುವೆಗೆ ಬಂದಿದ್ದೆ. ಮನತುಂಬಿ ಹರಸಿದ್ದೆ ಇಬ್ಬರನ್ನೂ.